**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 21 (157) |
| ಸದಸ್ಯರ ಹೆಸರು | : | ಡಾ: ಧನಂಜಯ ಸರ್ಜಿ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 17-08-2026 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಮಂಜೂರಾಗಿರುವ "ಗಣಕ ವಿಜ್ಞಾನ" (Computer Science) ಉಪನ್ಯಾಸಕರ ಸಂಖ್ಯೆ ಎಷ್ಟು; ಖಾಯಂ ಹಾಗೂ ಅತಿಥಿ ಉಪನ್ಯಾಸಕರ ಸಂಖ್ಯೆ ಎಷ್ಟು; | ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಮಂಜೂರಾಗಿರುವ ಗಣಕವಿಜ್ಞಾನ ಉಪನ್ಯಾಸಕರ ಹುದ್ದೆಗಳ ಸಂಖ್ಯೆ: 154.<br><br>ಖಾಯಂ ಉಪನ್ಯಾಸಕರ ಸಂಖ್ಯೆ: 12.<br><br>ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಗಣಕವಿಜ್ಞಾನ ವಿಷಯವನ್ನು ಬೋಧಿಸಲು ಅನುಮತಿಯನ್ನು ನೀಡಿದ್ದು, ಹುದ್ದೆ ಮಂಜೂರು ಮಾಡದೇ ಇರುವಂತಹ ಪ್ರಕರಣಗಳನ್ನು ಸೇರಿ ಒಟ್ಟು 401 ಅತಿಥಿ ಉಪನ್ಯಾಸಕರು ಕಾರ್ಯ ನಿರ್ವಹಿಸುತ್ತಿದ್ದಾರೆ. |
| ಆ) | ಖಾಯಂ ಹಾಗೂ ಅತಿಥಿ ಉಪನ್ಯಾಸಕರಿಗೆ ನಿಗಧಿಪಡಿಸಿರುವ ವಿದ್ಯಾರ್ಹತೆಗಳೇನು; (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು); | ಗಣಕವಿಜ್ಞಾನ ವಿಷಯವನ್ನು ಬೋಧಿಸುವ ಖಾಯಂ ಹಾಗೂ ಅತಿಥಿ ಉಪನ್ಯಾಸಕರುಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಇಡಿ 35 ಡಿಜಿಓ 2009 ದಿನಾಂಕ: 15-05-2014 ರಿಂದ ಜಾರಿಗೆ ಬಂದಿರುವ ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಉಪನ್ಯಾಸಕರು ಹುದ್ದೆಯ ನೇಮಕಾತಿಗೆ ಆಯಾ ವಿಷಯದ ಸ್ನಾತಕೋತ್ತರ ಪದವಿಯಲ್ಲಿ ಶೇಕಡ 55 ರಷ್ಟು ಅಂಕಗಳೊಂದಿಗೆ ಬಿ.ಇಡಿ. ಪದವಿಯನ್ನು ಹೊಂದಿರಬೇಕು. ಆದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ ಆಯಾ ವಿಷಯದ ಸ್ನಾತಕೋತ್ತರ ಪದವಿಯಲ್ಲಿ ಶೇಕಡ 50 ರಷ್ಟು ಅಂಕಗಳೊಂದಿಗೆ ಬಿ.ಇಡಿ ಪದವಿಯನ್ನು ಹೊಂದಿರಬೇಕು ಎಂದು ನಿಗಧಿಪಡಿಸಲಾಗಿದೆ.<br><br>Lecturer in Computer: Second Class Master's Degree with minimum 55% (50% for SC/ST) for marks in: BE Computer Science, BE-Information Science, MCA, MSc (Comp. Sc.), M Tech/ME in Computer Science /information Science and Engineering with B.Ed.<br><br>ಜಿಲ್ಲಾವಾರು, ತಾಲ್ಲೂಕುವಾರು ವಿದ್ಯಾರ್ಹತೆಗಳನ್ನು ನಿಗಧಿಪಡಿಸಿರುವುದಿಲ್ಲ. |

| | | |
|---|---|---|
| ಇ) | M.S. Computer Science ಹೊರತುಪಡಿಸಿ BE, M.Tech, MCA ಪದವಿದರರಿಗೆ ನಿರ್ದಿಷ್ಟವಾಗಿ B.Ed ನಲ್ಲಿ ಮೆತಡಾಲಜಿ ಇಲ್ಲದಿರುವುದರಿಂದ, ನೇಮಕಾತಿಗಳಲ್ಲಿ B.Ed ನಿಂದ ವಿನಾಯಿತಿ ನೀಡಲಾಗುವುದೇ; ಈ ಸಂಬಂಧ ಸರ್ಕಾರದ ನಿಲುವೇನು; | ಉಪನ್ಯಾಸಕರ ನೇಮಕಾತಿ ಸಂಬಂಧ B.Ed ನಿಂದ ವಿನಾಯಿತಿ ನೀಡುವ ಪ್ರಸ್ತಾವನೆ ಇರುವುದಿಲ್ಲ. |
| ಈ) | ಕ್ರೈಸ್ ((KRIES) ವಸತಿ ಶಾಲೆಗಳ ಗಣಕ ಶಿಕ್ಷಕರ ನೇಮಕಾತಿ ವೇಳೆ ನಿಂದ ವಿನಾಯಿತಿ ನೀಡಿದ್ದು, ನೇಮಕಾತಿಯ 5 ವರ್ಷಗಳಲ್ಲಿ B.Ed ಪದವಿ ಪಡೆಯುವ ಷರತ್ತು ವಿಧಿಸಲಾಗಿದ್ದು, ಅದೇ ಮಾದರಿಯಲ್ಲಿ PU ಕಾಲೇಜು ಗಣಕ ವಿಜ್ಞಾನ ಉಪನ್ಯಾಸಕರಿಗೆ B.Ed ವಿನಾಯಿತಿ ನೀಡುವುದು ಸರಿಯಲ್ಲವೇ; ಈ ಸಂಬಂಧ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ? | ನೇಮಕಾತಿ ಮಾಡುವ ಸಂದರ್ಭದಲ್ಲಿ ಗಣಕವಿಜ್ಞಾನ ವಿಷಯಕ್ಕೆ ಬಿ.ಇಡಿ. ಪದವಿಯಿಂದ ವಿನಾಯಿತಿ ನೀಡುವ ಸಲುವಾಗಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ತಿದ್ದುಪಡಿ ತರುವ ಪ್ರಸ್ತಾವನೆ ಯಾವುದು ಇರುವುದಿಲ್ಲ. |

ಸಂಖ್ಯೆ: ಇಪಿ 250 ಡಿಜಿಡಬ್ಲ್ಯೂ 2026

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು